109 ನೇ ಅಧಿವೇಶನ

342 ಶ್ರೀ ವಿಶ್ವನಾಥ.ಎಸ್.ಆರ್. (ಯಲಹಂಕ)

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ 'ಸಿ' ದರ್ಜೆಯ ಹುದ್ದೆಗಳೆಷ್ಟು? (ದ್ವಿತೀಯ ದರ್ಜೆ ಸಹಾಯಕ/ತತ್ಸಮಾನ ಹುದ್ದೆಗಳ ವಿವರ ನೀಡುವುದು)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ 'ಸಿ' ದರ್ಜೆಯ ಹುದ್ದೆಗಳ ಸಂಖ್ಯೆ 18. ಇದರಲ್ಲಿ ದ್ವಿತೀಯ ದರ್ಜೆ ಸಹಾಯಕರ ಖಾಲಿ ಹುದ್ದೆಗಳ ಸಂಖ್ಯೆ 04. ತತ್ಸಮಾನ ಹುದ್ದೆಗಳು ಯಾವುದೂ ಖಾಲಿ ಇರುವುದಿಲ್ಲ.

ಸಂಖ್ಯೆ:ಮಮಇ 94 ಎಸ್‌ಜೆಡಿ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

343 ಶ್ರೀ ಎಸ್.ಆರ್.ವಿಶ್ವನಾಥ್ (ಯಲಹಂಕ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಗ್ರಾಹಕ ವ್ಯವಹಾರಗಳ ಸಚಿವರು

1) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ 'ಸಿ' ದರ್ಜೆ ಹುದ್ದೆಗಳೆಷ್ಟು? (ದ್ವಿತೀಯ ದರ್ಜೆ/ ತತ್ಸಮಾನ ಹುದ್ದೆಗಳು) ವಿವರ ನೀಡುವುದು.

1) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:

ಬೆಂಗಳೂರು ನಗರ ಜಿಲ್ಲೆಯಲ್ಲಿ ಸಿ ದರ್ಜೆಯ ಖಾಲಿ ಹುದ್ದೆಗಳು ಈ ಕೆಳಕಂಡಂತೆ ಇರುತ್ತದೆ:

1) ಮಂಜೂರಾದ ವ್ಯವಸ್ಥಾಪಕರು/ತಿರಸ್ತೇದಾರರ ಹುದ್ದೆಗಳು–6, 5 ಹುದ್ದೆ ಭರ್ತಿಯಾಗಿದು, 1 ಹುದ್ದೆ ಖಾಲಿ ಇರುತ್ತದೆ.
2) ಮಂಜೂರಾದ ಲೆಕ್ಕಾಧೀಕ್ಷಕರು ಹುದ್ದೆ–1, ಹುದ್ದೆ ಖಾಲಿ ಇರುವುದಿಲ್ಲ.
3) ಮಂಜೂರಾದ ಪ್ರಥಮ ದರ್ಜೆ ಸಹಾಯಕರು/ಆಹಾರ ನಿರೀಕ್ಷಕರ ಹುದ್ದೆಗಳು–13, 11 ಹುದ್ದೆ ಭರ್ತಿಯಾಗಿದ್ದು, 2 ಹುದ್ದೆ ಖಾಲಿ ಇರುತ್ತವೆ.
4) ಮಂಜೂರಾದ ದ್ವಿತೀಯ ದರ್ಜೆ ಸಹಾಯಕರು–6, ಹುದ್ದೆ ಖಾಲಿ ಇರುವುದಿಲ್ಲ.

5) ಮಂಜೂರಾದ ಬೆರಳಚ್ಚುಗಾರರ ಹುದ್ದೆಗಳು–1, ಹುದ್ದೆ ಖಾಲಿ ಇರುವುದಿಲ್ಲ

6) ಮಂಜೂರಾದ ವಾಹನ ಚಾಲಕರ ಹುದ್ದೆ–1, ಹುದ್ದೆ ಖಾಲಿ ಇರುವುದಿಲ್ಲ.

2) ಕಾನೂನು ಮಾಪನಶಾಸ್ತ್ರ ಇಲಾಖೆ:

ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ವ್ಯಾಪ್ತಿಯಲ್ಲಿ ಯಾವುದೇ ಸಿ ದರ್ಜೆ ಹುದ್ದೆಗಳು (ದ್ವಿತೀಯ ದರ್ಜೆ ಸಹಾಯಕರ/ತತ್ಸಮಾನ ಹುದ್ದೆಗಳು) ಖಾಲಿ ಇರುವುದಿಲ್ಲ.

ಸಂಖ್ಯೆ: ಆನಾಸ 39 ಆಇಸೇ 2009

(ಹೆಚ್.ಹಾಲಪ್ಪ)
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

345 ಶ್ರೀ ಶಿವಶಂಕರ ರೆಡ್ಡಿ, ಎನ್.ಹೆಚ್

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಬಿ.ಪಿ.ಎಲ್.,ಎ.ಪಿ.ಎಲ್.ಅಂತ್ಯೋದಯ ಪಡಿತರ ಚೀಟಿಗಳನ್ನು ಹಂಚಿಕೆ ಮಾಡುವಲ್ಲಿ ವಿಳಂಬ ನೀತಿಯನ್ನು ಅನುಸರಿಸಲಾಗುತ್ತಿರುವುದು ನಿಜವೇ;

ಇದರಿಂದಾಗಿ ಬಡವರಿಗೆ ತುಂಬಾ ಅನಾನುಕೂಲವಾಗಿದ್ದು, ತೀವ್ರ ರೀತಿಯ ಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ

ಇಲ್ಲ

ಆ) ಹಾಗಿದ್ದಲ್ಲಿ, ಬಿ.ಪಿ.ಎಲ್., ಎ.ಪಿ.ಎಲ್., ಅಂತ್ಯೋದಯ ಪಡಿತರ ಚೀಟಿಯನ್ನು ಯಾವ ಯಾವ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ;

ವಿತರಣೆ ಮಾಡಲಾದ ಸಂಖ್ಯೆ ಎಷ್ಟು; ಬಾಕಿ ಇರುವ ಕಾರ್ಡುಗಳನ್ನು ಯಾವಾಗ ವಿತರಣೆ ಮಾಡಲಾಗುವುದು (ವಿವರ ನೀಡುವುದು)

ಗ್ರಾಮಾಂತರ ಪ್ರದೇಶದಲ್ಲಿ 12,000/–ರೂ. ಹಾಗೂ ಪಟ್ಟಣ ಪ್ರದೇಶದಲ್ಲಿ 17,000/–ರೂ. ಕ್ಕಿಂತ ವಾರ್ಷಿಕ ವರಮಾನ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳಿಗೆ ಬಿಪಿಎಲ್/ಅಂತ್ಯೋದಯ ಹಾಗೂ ಬಿಪಿಎಲ್ ಆದಾಯ ಮಿತಿಗಿಂತ ಹೆಚ್ಚಿರುವ ಫಲಾನುಭವಿಗಳಿಗೆ ಎಪಿಎಲ್ ಪಡಿತರ ಚೀಟಿ ವಿತರಣೆ ಮಾಡಲಾಗಿದೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ವಿತರಣೆ ಮಾಡಲಾದ ಅಂತ್ಯೋದಯ ಅನ್ನ ಪಡಿತರ ಚೀಟಿಗಳು 8,215, ಅಕ್ಷಯ (ಬಿಪಿಎಲ್) 43,879, ಎಪಿಎಲ್